ಸಂ.ಎಸ್ ಸಿ ಆರ್ ಸಿ ಆರ್ 339/09-10

ತಾಲೂಕು ಕಚೇರಿ ಬೆಳ್ತಂಗಡಿ
ದಿನಾಂಕ 08-11-2010

**ಅಧಿಕೃತ ಜ್ಞಾಪನಾ**

ವಿಷಯ:- ಸರಕಾರಿ- ಕಂದಾಯ ಭೂಮಿಯನ್ನು ಸಂರಕ್ಷಿಸಲು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವ ಬಗ್ಗೆ.

ಉಲ್ಲೇಖ:- ಸರಕಾರದ ಆದೇಶ ಸಂಖ್ಯೆ ಕಂ.ಇ.82 ಎಲ್‌ಜಿಕ್ಯೂ 99(ಪಿ1) ಬೆಂಗಳೂರು ದಿನಾಂಕ 13-11-2008

- - -

ಸರ್ಕಾರೀ ಭೂಮಿಯ ಒತ್ತುವರಿಯನ್ನು ಪತೆಹಚ್ಚಿ ತೆರವುಗೊಳಿಸಿ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 192(ಎ)ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವಂತೆ ಉಲ್ಲೇಖಿತ ಸರಕಾರದ ಆದೇಶದಲ್ಲಿ ನಿರ್ದೇಶನ ನೀಡಿರುವುದರಿಂದ ಈ ಕೆಳಗೆ ಕಾಣಿಸಿದಂತೆ ಬೆಳ್ತಂಗಡಿ ತಾಲೂಕು ಮಟ್ಟದ ಕಾರ್ಯವ್ಯಾಪ್ತಿಯಲ್ಲಿ ಪ್ರಾಧಿಕಾರವನ್ನು ರಚಿಸಿದೆ.

| | |
|---|---|
| 1. ತಹಸೀಲ್ದಾರರು ಬೆಳ್ತಂಗಡಿ | - ಅಧ್ಯಕ್ಷರು |
| 2. ಕೇಂದ್ರಸ್ಥಾನೀಯ ಉಪತಹಸೀಲ್ದಾರರು, ತಾಲೂಕು ಕಚೇರಿ ಬೆಳ್ತಂಗಡಿ | - ಸದಸ್ಯ ಕಾರ್ಯದರ್ಶಿ |
| 3.ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಬೆಳ್ತಂಡಿ | - ಸದಸ್ಯರು |
| 4. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಜಿ.ಪಂ ಇಂಜಿನಿಯರಿಂಗ್ ಉಪವಿಭಾಗ, ಬೆಳ್ತಂಗಡಿ | - ಸದಸ್ಯರು |
| 5. ತಾಲ್ಲೂಕು ಆರೋಗ್ಯಾಧಿಕಾರಿ, ಬೆಳ್ತಂಗಡಿ. | - ಸದಸ್ಯರು |
| 6. ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೆಳ್ತಂಗಡಿ | - ಸದಸ್ಯರು |
| 7. ಮುಖ್ಯಾಧಿಕಾರಿ, ನಗರ ಪಂಚಾಯತ್ , ಬೆಳ್ತಂಗಡಿ | - ಸದಸ್ಯರು |
| 8. ವಲಯ ಅರಣ್ಯಾಧಿಕಾರಿ, ಬೆಳ್ತಂಗಡಿ, ಉಪ್ಪಿನಂಗಡಿವೇಣೂರು | - ಸದಸ್ಯರು |
| 9. ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಬೆಳ್ತಂಗಡಿ | -ಸದಸ್ಯರು |
| 10. ವಲಯ ಅರಣ್ಯಾಧಿಕಾರಿ, ವನ್ಯ ಜೀವಿ ವಿಭಾಗ ಬೆಳ್ತಂಗಡಿ | -ಸದಸ್ಯರು |
| 11.ಸಹಾಯಕ ನಿರ್ದೇಶಕರು , ಕೃಷಿ ಇಲಾಖೆ ಬೆಳ್ತಂಗಡಿ | -ಸದಸ್ಯರು |
| 12. .ಸಹಾಯಕ ನಿರ್ದೇಶಕರು, ತೋಟಗಾರಿಕಾ ಇಲಾಖೆ ಬೆಳ್ತಂಗಡಿ | -ಸದಸ್ಯರು |
| 13. ಕ್ಷೇತ್ರ ಶಿಕ್ಷಣಾಧಿಕಾರಿ ಬೆಳ್ತಂಗಡಿ | -ಸದಸ್ಯರು |

ಪ್ರಾಧಿಕಾರವು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯ ನಿರ್ವಹಿಸತಕ್ಕದ್ದು.

1. ಸರ್ಕಾರೀ ಭೂಮಿಯ ಒತ್ತುವರಿಯನ್ನು ಪತ್ತೆಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು.
3. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 192(ಎ)ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

ತಹಸೀಲ್ದಾರರು
ತಹಸೀಲ್ದಾರರು ಬೆಳ್ತಂಗಡಿ
ಬೆಳ್ತಂಗಡಿ, ದ ಕ

ಸಂಬಂಧಪಟ್ಟವರಿಗೆ.